ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಪತ್ನಿಗೂ, ಪ್ರೇಯಸಿಗೂ ಏನು ವ್ಯತ್ಯಾಸ?



ಪ್ರೇಯಸಿಯ ಪ್ರತಿ ಮುನಿಸಿಗೂ ಪ್ರತಿಫಲ ದೊರಕುತ್ತದೆ.

ರಾಜಶೇಖರ ಹಾದಿಮನಿ, ಧಾರವಾಡ
ಸತ್ಯ, ಸುಳ್ಳುಗಳ ಅಂತರವೆಷ್ಟು?
ಎರಡು ಗೇಣು–ಹೃದಯದಿಂದ ಬಂದದ್ದು ಸತ್ಯ; ಬುದ್ಧಿಯೋಡಿಸಿ ಬಂದದ್ದು ಸುಳ್ಳು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ದೀಪ ಬೆಳಗುತ್ತದೆ; ಹೂ ಅರಳುತ್ತದೆ. ರಾಜಕೀಯ ನಾಯಕ?
ಕೆರಳುತ್ತಾನೆ, ಹೊರಳುತ್ತಾನೆ.

ಪಿ. ಜಯವಂತ ಪೈ, ಕುಂದಾಪುರ
ಗೊರಕೆಗೂ, ಪೊರಕೆಗೂ ವ್ಯತ್ಯಾಸವೇನು?
ಗೊರಕೆ ಅಕ್ಕಪಕ್ಕ ಮಲಗಿದವರನ್ನು ಗುಡಿಸಿ ಹೊರಹಾಕುತ್ತದೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಹಿರಿಯ ನಾಗರಿಕರಿಗೆ ನಿಮ್ಮ ಸಲಹೆ ಏನು?



ಸಲಹೆಯಲ್ಲ, ದೇಹ ಕುಗ್ಗಿದರೂ ಮನಸ್ಸು ಕುಗ್ಗದಿರಲಿ ಎಂಬ ಹಾರೈಕೆ.

ಬಿ. ಬಸವರಾಜ್, ಹರಿಹರ
ಸನ್ ಸ್ಟ್ರೋಕ್ ಹೆಚ್ಚಾಗಿ ಆಗುವುದು ಅಮ್ಮಂದಿರಿಗೇ ಏಕೆ?
ಸನ್‌ಗೆ ಸಮೀಪ ಇರುವುದು ಅಮ್ಮನೇ ಆದ್ದರಿಂದ ಶಾಖ ತಟ್ಟುವುದು ಅವಳಿಗೇ.

ನಾರಾಯಣ ಯಾಜಿ, ಶಿರಾಲಿ
ನಗುವಿನಲಿ ಚೆಂದಾತಿಚೆಂದ ನಗುವೆಂದರೆ ಪುಟ್ಟ ಮಗುವಿನದು. ಏನಂತೀರಾ?
ರಚ್ಚೆ ಹಿಡಿದ ಮಗುವನ್ನು ರಮಿಸಿ ಮಲಗಿಸಿ ಪ್ರೀತಿಯಿಂದ ನಸುನಗುವ ಅಮ್ಮನದು ಅಂತೀನಿ.

ಎಲ್.ಐ.ಸಿ. ವಿಜೇಂದ್ರ, ಮೈಸೂರು
ದೇವಸ್ಥಾನಕ್ಕೆ ಬರುವಾಗಲೂ ಕೆಲವು ಹೆಂಗಸರು ಬೆನ್ನು ಕಾಣುವ ಕುಪ್ಪಸ ತೊಟ್ಟು ಬರುವುದೇಕೆ?
ಅವರು ದೇವನೇ ನಿಮ್ಮ ಭಕ್ತಿಯ ಏಕಾಗ್ರತೆಯನ್ನು ಪರೀಕ್ಷಿಸಲು ಕಳುಹಿಸಿದ ಅಪ್ಸರೆಯರು.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಗುರುವಿನ ಬೆತ್ತಕ್ಕೂ, ಪೊಲೀಸ್ ಲಾಠಿಗೂ ಇರುವ ವ್ಯತ್ಯಾಸವೇನು?
ಇದು ಚಟ್ಟಿ ಹೊರಹಾಕುತ್ತದೆ; ಅದು ಚಟ್ಟಿ ಒಳಹಾಕುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ
ಸಚಿವರ ಪ್ರಕಾರ ಶೀಘ್ರ ಎಂದರೆ ಎಷ್ಟು ವರ್ಷ, ಎಷ್ಟು ತಿಂಗಳು, ಎಷ್ಟು ದಿನ?
ಒಂದೇ ದಿನ–ನಾಳೆಯೇ. ಯಾವತ್ತಿಗೆ ನಾಳೆ ಎಂದು ತಿಳಿಯದಷ್ಟೆ.

ಸಿಹಿಮೊಗೆ ರಮೇಶ್, ಮೈಸೂರು
ಬದುಕಿದ್ದೂ ಸತ್ತಂತಿರುವವರಿಗೂ, ಸತ್ತನಂತರವೂ ಬದುಕಿರುವವರಿಗೂ ವ್ಯತ್ಯಾಸವೇನು?
ಇವರು ಸಾದಾ ಕರು; ಅವರು ಸಾಧಕರು.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಪುನರ್ವಿವಾಹ ಮಾಡಿಕೊಂಡವರು ದಡ್ಡರೋ, ಬುದ್ಧಿವಂತರೋ?
ಲಾಟರಿಯಲ್ಲಿ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುವವರು.

ಜಗದೀಶ ಬಿ. ಹೊಸೂರು, ಮೈಸೂರು
ಬದುಕಿರುವಾಗ ಸಾಕಪ್ಪಾ ಬದುಕು ಎನ್ನುವವರು ಸಾವು ಸಮೀಪಿಸಿದಾಗ ಬದುಕಲು ಚಡಪಡಿಸುವುದೇಕೆ?
ಸ್ಟಾಕ್ ಮುಗಿಯುವಾಗಲೇ ವಸ್ತುವಿನ ಪ್ರಾಮುಖ್ಯತೆ, ಅವಶ್ಯಕತೆ ತಿಳಿಯುವುದು.

ಸುಮಾ ರಮೇಶ್, ಹಾಸನ
ಇಂದು ಸಾಲ ಕೊಟ್ಟವನ ಕಿಬ್ಬದಿಯ ಕೀಲೇ ಮುರಿಯುತ್ತಿದೆಯಲ್ಲಾ?
ಸಾಲ ಪಡೆಯುವವರು 'ಜಾರೇರೇ ಸಾಲಾ' ಎನ್ನುವ ರೌಡಿಗಳಾಗುತ್ತಿರುವುದರಿಂದ.

## ಬಹುಮಾನಿತ ಪ್ರಶ್ನೆ

ರಾಜೀವ್ ಎನ್. ಮಾಗಲ್, ಸಕಲೇಶಪುರ
ಪ್ರಾಣಿಗಳು ನಾಡಿಗೆ ಬಂದರೆ ಅದು ಸಂಘರ್ಷ. ಮಾನವ ಕಾಡಿಗೆ ಹೋದರೆ?
ಅದು ಅರಣ್ಯ ವಿನಾಶ.

ಅನಂತಪದ್ಮನಾಭ ಎಚ್.ಎಂ., ಮೈಸೂರು
ಮ್ಯಾರೇಜಿಗೂ, ಗ್ಯಾರೇಜಿಗೂ ಇರುವ ಸಾಮ್ಯವೇನು?
ಎರಡೂ ಕಡೆ ರೇಜಿಗೆ ತಪ್ಪಿದ್ದಲ್ಲ.

ರತ್ನಜ, ಮೈಸೂರು
ಭೀಷ್ಮರಂತೆ ಎಲ್ಲರೂ ಇಚ್ಛಾಮರಣಿಗಳಾಗಿದ್ದರೆ ಚೆನ್ನಾಗಿರುತ್ತಿತ್ತಲ್ಲವೆ?
'ಊಹೂಂ. ನಮ್ಮ ಬಿಲ್ ಕಡಿಮೆಯಾಗುತ್ತಿತ್ತು' ಎಂದರು ನರ್ಸಿಂಗ್ ಹೋಮಿನವರು.

ಅನಸೂಯ ಟಿ., ಕೇದಿಗೆಮನೆ
ದಿನ ಕಳೆದಂತೆ ಹೊಚ್ಚ ಹೊಸದಾಗುವ ವಸ್ತು ಯಾವುದು ಗುರುವೆ?



ಸೂರ್ಯ.

ಎನ್. ವೈದೇಹಿ, ಮೈಸೂರು
ಶಾಂತಿ ಮತ್ತು ನೆಮ್ಮದಿಯ ಅವಶ್ಯಕತೆ ಜೀವಿಸುತ್ತಿರುವವರಿಗೋ ಅಥವಾ ಮೃತರಿಗೋ?
ಬದುಕಿನಲ್ಲಿ ಜೀವಿಸುತ್ತಿರುವವರಿಗೆ; ಫೇಸ್‌ಬುಕ್‌ನಲ್ಲಿ (ರಿಪ್, ಶಾಂತಿ ಸಿಗಲಿ...) ಮೃತರ ವಾಲ್‌ಗೆ.

ವಿ. ಹೇಮಂತ ಕುಮಾರ್, ಬೆಂಗಳೂರು
ಹೆಂಡತಿಯು ಆಗಾಗ ಅತಿಯಾದ ಪ್ರೀತಿ ತೋರಿಸುವ ಗುಟ್ಟೇನು?
ಅದರಲ್ಲಿ ಗುಟ್ಟೇನೂ ಇಲ್ಲ. ಮುಂದಿನ ಅಗ್ನಿಪರೀಕ್ಷೆಗೆ ಸಿದ್ಧಗೊಳಿಸಲು ಆಗಾಗ ನಡೆಸುವ ಕಿರುಪರೀಕ್ಷೆ.

■ ರಾಮ್